**ಓ.ಎಸ್. ನಂಬರಃ 6/2021**

**ಪಿ.ಡಬ್ಲ್ಯೂಃ 1**

**( ಇಂದು ದಿಃ 24.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ನನ್ನ ಸಾಕ್ಷಿ ಪ್ರಮಾಣಪತ್ರವನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ ಮತ್ತು ಈ ಕೆಳಕಂಡ ದಾಖಲೆಗಳನ್ನು ನನ್ನ ಮುಖ್ಯ ವಿಚಾರಣೆ ಸಲುವಾಗಿ ಹಾಜರುಪಡಿಸುತ್ತಿದ್ದೇನೆ.

ಅಧಿಕಾರ ಪತ್ರವನ್ನು ನಿಪಿ-1, ನಮ್ಮ ಕಚೇರಿಯ ಹಿಂದಿನ ವ್ಯವಸ್ಥಾಪಕರಾದ ಮಹೇಶ ಶಿವಾನಂದ ಮುರ್ಡೇಶ್ವರ ರವರಿಗೆ ದಾವೆಯನ್ನು ಸಲ್ಲಿಸಲು ನೀಡಿದ ಅಧಿಕಾರ ಪತ್ರವನ್ನು ನಿಪಿ-2, ದಿಃ 28.01.2019 ರ ಶುದ್ಧ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ-3, ಫಾರಂ ನಂ.9 ನ್ನು ನಿಪಿ-4, ಫಾರಂ ನಂ.11 ಎ ನ್ನು ನಿಪಿ-5, ಸರ್ವೆ ನಂ.7 ಅ ಹಿಸ್ಸಾ 14 ರ ಪಹಣಿ ಪತ್ರಿಕೆಯನ್ನು ನಿಪಿ-6, ತಾಗದೆ ಬಿಲ್ಲಿನ ಮೂಲ ಪ್ರತಿಯನ್ನು ನಿಪಿ-7, ಸಾಮಾನ್ಯ ರಶೀದಿಯನ್ನು ನಿಪಿ-8, ಮುಂಗಡ ಹಣ ಪಾವತಿಸಿದ ಬಗ್ಗೆ ಇರುವ ಬ್ಯಾಂಕ್ ಸ್ಟೇಟಮೆಂಟ್ ನ್ನು ನಿಪಿ-9, ಮತ್ತೊಂದು ಬ್ಯಾಂಕ್ ಸ್ಟೇಟಮೆಂಟ್ ನ್ನು ನಿಪಿ-10, ದಿಃ 30.09.2020 ರಂದು ನಮ್ಮ ಸಂಸ್ಥೆಯ ವಕೀಲರು ಪ್ರತಿವಾದಿಗೆ ಕಳುಹಿಸಿದ ನೋಟಿಸಿನ ಪ್ರತಿಯನ್ನು ನಿಪಿ-11, ನಮ್ಮ ವಕೀಲರಿಗೆ ಪ್ರತಿವಾದಿ ವಕೀಲರು ನೀಡಿದ ಉತ್ತರದ ಪ್ರತಿಯನ್ನು ನಿಪಿ-12, ದಿಃ 09.11.2020 ರಂದು ನಮ್ಮ ವಕೀಲರು ಪ್ರತಿವಾದಿಗೆ ಕಳುಹಿಸಿದ ಮತ್ತೊಂದು ನೋಟಿಸ್ ನ್ನು ನಿಪಿ-13, ಪೋಸ್ಟಲ್ ರಶೀದಿಯನ್ನು ನಿಪಿ-14, ಎಡಿ ಕಾರ್ಡ್‌ನ್ನು ನಿಪಿ-15 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿಯಾಗಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಆಲಿಸಿ ನೀಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

sd/-

**ಹೆ.ನ್ಯಾ ದ., ಭಟ್ಕಳ**